**ಸಾಕ್ಷಿಯನ್ನು ದಿಃ 08.08.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಕುಮಾರಿ. ಸಂಗೀತ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಪ್ರತಿವಾದಿಪರ ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ .

ಪಾಟೀ ಸವಾಲುಃ ಶ್ರೀ.ಕೆ.ವಿ.ಪಿ ವಾದಿ ಪರ ವಕೀಲರಿಂದಃ

ಸಕ್ಕನಹಳ್ಳಿ ಗ್ರಾಮದಲ್ಲಿ ನಾನು ವಾಸ ಇರುತ್ತೇನೆ. ನನಗೆ ಸೇರಿದ ಜಮೀನು ರಾಮಚಂದ್ರಪುರ ಗ್ರಾಮದಲ್ಲಿ 1 ಎಕರೆ 12 ಗುಂಟೆ ಇರುತ್ತದೆ. ನನಗೆ ವಾದಿ ಮತ್ತು ಪ್ರತಿವಾದಿಯ ಪರಿಚಯ ಇರುತ್ತದೆ. ವಾದಿ ಸೊಣ್ಣಪ್ಪ ರವರು ಪ್ರತಿವಾದಿ ಸುಶೀಲಮ್ಮ ರವರ ವಿರುದ್ಧ ಈ ದಾವೆ ತಂದಿರುತ್ತಾರೆ. ಖಾತೆ ನಂ.1 ರ ಸಂಬಂಧ ಈ ಪ್ರಕರಣ ಇರುತ್ತದೆ. ಖಾತೆ ನಂ.45 ರ ಸಂಬಂಧ ಸಹಾ ತಕರಾರು ಇರುತ್ತದೆ. ವಾದಿ ಈ ಪ್ರಕರಣವನ್ನು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ ಖಾತೆ ನಂ. 1 ರ ಸ್ವತ್ತಿನಲ್ಲಿ ಭಾಗ ಬರಬೇಕು ಎಂದು ಪ್ರತಿವಾದಿ ಪರಿಹಾರ ಕೋರಿರುತ್ತಾರೆ. ಖಾತಾ ನಂ.45 ರಲ್ಲಿ ಪ್ರತಿವಾದಿಯ ಗಂಡ, ವಾದಿ ಮತ್ತು ಬೊಡಪ್ಪ ಮನೆ ಕಟ್ಟಿರುತ್ತಾರೆ. ಸದರಿ ಮನೆಯ ಬಾಗಿಲು ಪೂರ್ವಕ್ಕೆ ಇರುತ್ತದೆ.

ಖಾತಾ ನಂ. 1 ರ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಜಮೀನು, ಉತ್ತರಕ್ಕೆ ಜಮೀನು ಮತ್ತು ದಕ್ಷಿಣಕ್ಕೆ ಚಿನ್ನಪ್ಪ ರವರ ಜಾಗ ಇರುತ್ತದೆ. ನಾನು ಸದರಿ ಚೆಕ್ಕುಬಂದಿ ಸಂಬಂಧ ಯಾವುದೇ ದಾಖಲಾತಿ ನೋಡಿಲ್ಲ. ಖಾತೆ ನಂಬರ್ 1 ರ ಸ್ವತ್ತು ಖಾಲಿ ಜಾಗ ಇರುತ್ತದೆ. ಖಾತೆ ನಂಬರ್ 45 ರ ಖಾತೆ ಸೊಣ್ಣಪ್ಪ, ವೆಂಕಟೇಶಪ್ಪ ಮತ್ತು ಬೊಡಪ್ಪ ರವರ ಹೆಸರಿನಲ್ಲಿ ಇರುತ್ತದೆ. ಖಾತೆ ನಂ. 1 ಮತ್ತು 45 ಬೇರೆ ಬೇರೆ ಸ್ವತ್ತುಗಳಾಗಿರುತ್ತವೆ. ಖಾತೆ ನಂ. 45 ರ ಮನೆಯ ಉತ್ತರಕ್ಕೆ ನನ್ನ ಮನೆ ಬರುತ್ತದೆ. ನನ್ನ ತಂದೆ ಪಾಪಯ್ಯ.

ಸದರಿ ಸ್ವತ್ತಿನ ದಕ್ಷಿಣಕ್ಕೆ ಬರುವ ಅಂಗಡಿ ಪಾಪಯ್ಯ ಬೇರೆಯವರಾಗಿರುತ್ತಾರೆ. ಖಾತೆ ನಂ.45 ರ ಸ್ವತ್ತಿನ ಸಂಬಂಧ ಈ ಪ್ರಕರಣ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**

**ಸಾಕ್ಷಿಯನ್ನು ದಿಃ 08.08.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ.ಕೆ.ವಿ.ಪಿ ವಾದಿ ಪರ ವಕೀಲರಿಂದಃ

ನಮ್ಮ ಮನೆಯ ಖಾತೆ ನಂ.104 ಇರುತ್ತದೆ. ಈ ಪ್ರಕರಣವನ್ನು ಸುಶೀಲಮ್ಮ ರವರು ತನ್ನ ಗಂಡನ ಅಣ್ಣ ನ ವಿರುದ್ದ ಸಲ್ಲಿಸಿರುತ್ತಾರೆ. ಸುಶೀಲಮ್ಮ ರವರು ಭಾಗಾಂಶ ಪರಿಹಾರ ಕೋರಿ ಈ ದಾವೆ ತಂದಿರುತ್ತಾರೆ. ಒಂದು ಮನೆಯ ಸ್ವತ್ತಿನ ಸಂಬಂಧ ದಾವೆ ಹೂಡಲಾಗಿರುತ್ತದೆ. ಸದರಿ ಮನೆಯ ಖಾತಾ ನಂ.45 ಇರುತ್ತದೆ. ಸದರಿ ಖಾತೆ ನಂ.45 ರ ಸ್ವತ್ತಿನಲ್ಲಿ ವಾದಿ, ಪ್ರತಿವಾದಿಯ ಗಂಡ ಮತ್ತು ಬೋಡಪ್ಪ ರವರು ಮನೆಗಳನ್ನು ಕಟ್ಟಿರುತ್ತಾರೆ. ಖಾತಾನಂ.45 ರ ಖಾತೆ ಸೊಣ್ಣಪ್ಪ ಮತ್ತು ವೆಂಕಟೇಶಪ್ಪ ರವರ ಹೆಸರಿನಲ್ಲಿರುತ್ತದೆ. ಪ್ರತಿವಾದಿ ಸುಶೀಲಮ್ಮ ರವರು ಖಾತೆ ನಂಬರ್ 45 ರ ಸ್ವತ್ತಿನಲ್ಲಿ ಭಾಗಾಂಶ ಕೋರಿ ಈ ದಾವೆ ಹೂಡಿರುತ್ತಾರೆ. ಸದರಿ ಖಾತೆ ನಂಬರ್ 45 ರ ಸ್ವತ್ತಿನ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ನಮ್ಮ ಮನೆ ಬರುತ್ತದೆ.

ಖಾತಾ ನಂ. 45 ರ ಸ್ವತ್ತಿನ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ಮುನಿಯಪ್ಪನ ಮನೆ , ಉತ್ತರಕ್ಕೆ ಪಾಪಯ್ಯ ರವರ ಮನೆ ಮತ್ತು ದಕ್ಷಿಣಕ್ಕೆ ಅಂಗಡಿ ಪಾಪಯ್ಯನವರ ಮನೆ ಇರುತ್ತದೆ. ಸದರಿ ಸ್ವತ್ತಿನಲ್ಲಿ ಸುಮಾರು 15 ವರ್ಷಗಳ ಹಿಂದೆ ವಾದಿ ಮತ್ತು ಅವರ ಸಹೋದರರು ಮನೆ ಕಟ್ಟಿರುತ್ತಾರೆ. ನಾನು ವಾದಿಯ ಜೊತೆ ಚನ್ನಾಗಿ ಇರುತ್ತೇನೆ. ನಾನು ಕಾರ್ಪೆಂಟರ್ ಕೆಲಸ ಮತ್ತು ವ್ಯವಸಾಯ ಮಾಡುತ್ತೇನೆ. ನಾನು ಪಂಚಾಯತಿ ಸದಸ್ಯನಾಗಿ 5 ವರ್ಷ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ನಾನು ಪಂಚಾಯತಿ ಸದಸ್ಯ ಆಗುವ ಪೂರ್ದಲ್ಲಿಯೇ ವಾದಿ ಮತ್ತು ಪ್ರತಿವಾದಿ ಗಂಡ ಸದರಿ ಸ್ವತ್ತಿನಲ್ಲಿ ಮನೆಗಳನ್ನು ಕಟ್ಟಿದ್ದರು. ವಾದಿ ಮತ್ತು ಪ್ರತಿವಾದಿಯ ಮನೆಯ ಮುಂದೆ ನಾನು ಪಂಚಾಯತಿ ಸದಸ್ಯ ಆಗಿದ್ದ ಕಾಲದಲ್ಲಿ ಚರಂಡಿ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಸ್ವಲ್ಪ ತಕರಾರು ಆಗಿತ್ತು ಎಂದರೆ ಸರಿ.

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಪ್ರತಿವಾದಿಯ ಗಂಡನಿಗೂ ಖಾತೆ ನಂಬರ್ 45 ರ ಸ್ವತ್ತಿನಲ್ಲಿ ಭಾಗ ಇರುತ್ತದೆ ಎಂದು ಬರೆಸಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಯ ಮಾತು ಕೇಳಿ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾತೆ ನಂ.45 ರ ಸಂಬಂಧ ಸುಶೀಲಮ್ಮ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**